ಇ) ಹಾಗಿದ್ದಲ್ಲಿ ಸಿಂದಗಿ ತಾಲ್ಲೂಕಿನಲ್ಲಿ ಈ ಕಛೇರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ. ಅಭಯಚಂದ್ರ (ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು)

ಅ) ಹೌದು

ಆ) ಮೀನುಗಾರಿಕೆ ಅಭಿವೃದ್ಧಿ ದೃಷ್ಟಿಯಿಂದ ಸಿಂದಗಿ ತಾಲ್ಲೂಕಿನ ಎಲ್ಲಾ ಜಲಸಂಪನ್ಮೂಲಗಳನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ಬಿಜಾಪುರರವರ ಕಾರ್ಯವ್ಯಾಪ್ತಿಗೆ ಒಳಪಡಿಸಿದ್ದು, ಅವರ ಮುಖಾಂತರವೇ ಮೀನುಗಾರಿಕೆ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಸಿಂದಗಿ ತಾಲ್ಲೂಕಿನ ಎಲ್ಲಾ ಲಭ್ಯವಿರುವ ಸಂಪನ್ಮೂಲಗಳನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ವಿಜಾಪುರ ರವರ ಮುಖಾಂತರ ಅಭಿವೃದ್ಧಿ ಪಡಿಸಲಾಗುತ್ತಿರುವುದರಿಂದ, ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2),/ ಮೀನುಗಾರಿಕೆ ಹಿರಿಯ ಮೇಲ್ವಿಚಾರಕರು, ಸಿಂದಗಿ ಕಛೇರಿಯನ್ನು ಹೊಸದಾಗಿ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಆನೆಗಳ ದಾಳಿ

213 (257)' ಶ್ರೀ ಚೆಲುವ ನಾರಾಯಣ ಸ್ವಾಮಿ ಎನ್. (ನಾಗಮಂಗಲ)

ಅ) ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಎಲ್ಲೆಲ್ಲಿ ಆನೆಗಳ, ಆನೆಗಳ ಹಿಂಡಿನ ದಾಳಿ ರೈತರ ಜಮೀನಿನ ಮೆಲೆ, ಹಳ್ಳಿ ನಗರಗಳ ಮೇಲೆ ನಡೆದಿದೆ;

ಆ) ಆನೆಗಳ ಹಿಂಡು ಬೀಡು ಬಿಡುತ್ತಾ, ಸುತ್ತಾಡುತ್ತಾ, ಎಲ್ಲೆಲ್ಲಿ ಬೆಳೆಗೆ ಹಾನಿ ಮಾಡಿವೆ; ಇದಕ್ಕೆ ಕಾರಣಗಳೇನು; (ಪೂರ್ಣ ಮಾಹಿತಿ ಒದಗಿಸುವುದು);

ಇ) ಆನೆಗಳ ದಾಳಿಯಿಂದ ಮರಣ ಹೊಂದಿರುವ ವ್ಯಕ್ತಿಗಳ ಸಂಖ್ಯೆ ಎಷ್ಟು; ಇವರಿಗೆ ಪರಿಹಾರ ನೀಡಲಾಗಿದೆಯೇ (ವಿವರಒದಗಿಸುವುದು);

ಈ) ಬೆಳೆಹಾನಿ ಬಗ್ಗೆ ಅಂದಾಜು ಮಾಡಿ ಪರಿಹಾರ ನೀಡಲಾಗಿದೆಯೇ; (ವಿವರ ಒದಗಿಸುವುದು)

ಉ) ಆನೆಗಳು ರೈತರ ಬೆಳೆಗಳ ಹಾಗೂ ಹಳ್ಳಿಗಳ ಮೇಲೆ ದಾಳಿ ಮಾಡುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಊ) ಕೇವಲ ಕಂದಕ ಸೋಲಾರ್ ಬೇಲಿ ನಿರ್ಮಿಸುವ ಬದಲು ಕಾಡಿನಲ್ಲಿ ಸಾಕಷ್ಟು ನೀರಿನ ವ್ಯವಸ್ಥೆ, ಅವುಗಳಿಗೆ ಆಹಾರ ಒದಗಿಸುವ ಬಿದಿರು, ಹುಲ್ಲು, ಹಣ್ಣಿನ ಮರಗಳನ್ನು ಬೆಳೆಸಲು ಅರಣ್ಯ ಇಲಾಖೆ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

ಋ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಆನೆಗಳು ಮರಣ ಹೊಂದಿವೆ; ಆನೆಗಳು ಮರಣ ಹೊಂದಲು ಕಾರಣಗಳೇನು;

ಎ) ಆನೆ ಬೇಟೆ ಪ್ರಕರಣಗಳನ್ನು ದಾಖಲಿಸಿ ಅಪರಾಧಿಗಳ ವಿರುದ್ಧ ಕ್ರಮಕೈಗೊಳ್ಳಲಾಗಿದೆಯೇ;

ಏ) ಅನಧಿಕೃತ ವಿದ್ಯುತ್ ಬೇಲಿ ನಿರ್ಮಿಸಿ ಆನೆಗಳ ಸಾವಿಗೆ ಕಾರಣ ವಾಗುವುದನ್ನು ತಡೆಯಲು ಸರ್ಕಾರ ಕ್ರಮಕೈಗೊಳ್ಳುವುದೇ;

ಶ್ರೀ ಬಿ. ರಾಮನಾಥ ರೈ (ಮಾನ್ಯ ಅರಣ್ಯ ಸಚಿವರು)

ಅ) ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಮೈಸೂರು, ತುಮಕೂರು, ಕೋಲಾರ, ಹಾಸನ, ಕೊಡಗು, ರಾಮನಗರ, ಬೆಂಗಳೂರು (ನಗರ),

ಬೆಂಗಳೂರು (ಗ್ರಾಮಾಂತರ) ಜಿಲ್ಲೆಗಳ ವ್ಯಾಪ್ತಿಯಲ್ಲಿ ಆನೆಗಳು ದಾಳಿ ಮಾಡಿರುವುದು ವರದಿಯಾಗಿರುತ್ತದೆ.

ಆ) ಮೇಲೆ ತಿಳಿಸಿರುವ ಪ್ರದೇಶಗಳಲ್ಲಿ ಹಾಗೂ ಅಲ್ಲಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳೆ ಹಾನಿಯಾಗಿರುವ ಪ್ರಕರಣಗಳು ವರದಿ ಯಾಗಿರುತ್ತದೆ.

ಅರಣ್ಯ ಪ್ರದೇಶಗಳ ಅಂಚಿನಲ್ಲಿರುವ ಖಾಸಗಿ ಜಮೀನುಗಳಲ್ಲಿ ರೈತರು ಬೆಳೆಯುವ ಬೆಳೆಗಳಾದ ಬತ್ತ, ತೆಂಗು,ಬಾಳೆ, ಹಲಸು ಮತ್ತು ವಾಣಿಜ್ಯ ಬೆಳೆಗಳಿಗೆ ಕಾಡಾನೆಗಳು ಆಕರ್ಷಿತಗೊಂಡು ದಾಳಿ ಮಾಡುತ್ತಿರುವುದು ಕಂಡುಬಂದಿದೆ.

ಇ) ಆನೆಗಳ ದಾಳಿಯಿಂದ ಮೃತಪಟ್ಟಿರುವವರ ಹಾಗೂ ಅವರ ವಾರಸು ದಾರರಿಗೆ ಸರ್ಕಾರಿ ಆದೇಶದನ್ವಯ ನೀಡಿರುವ ದಯಾತ್ಮಕ ಧನದ ವಿವರ ಕೆಳಕಂಡಂತಿದೆ.

ರೂ ಲಕ್ಷಗಳಲ್ಲಿ

ವರ್ಷ	ಮೃತಪಟ್ಟಿರುವವರ ಸಂಖ್ಯೆ	ಪಾವತಿಸಲಾದ ಮೊತ್ತ
2010–11	33	50.50
2011–12	14	67.00
2012–13	38	190.00
2013–14 (ಜನೆವರಿ–20 2014 ರ ವರೆಗೆ	27	135.00

ಈ) ವನ್ಯಪ್ರಾಣಿಗಳಿಂದ ಸಂಭವಿಸುವ ಬೆಳೆಹಾನಿ ಪ್ರಕರಣಗಳಿಗೆ ಸರ್ಕಾರದ ಆದೇಶದ ಪ್ರಕಾರ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದೆ. ವಿವರ ಕೆಳ ಕಂಡಂತಿದೆ.

ಅ. ₹ 7500/– ವರೆಗಿನ ಬೆಳೆನಾಶಕ್ಕೆ ಬಳೆನಾಶದ ಪೂರ್ಣ ಮೊತ್ತ.

ಆ. ₹ 7,500/– ಗಳಿಗೆ ಮೇಲ್ಪಟ್ಟ ಹಾಗೂ ₹ 35,000/–ಗಳವರೆಗಿನ ಮೊತ್ತದ ಬೆಳೆನಾಶಕ್ಕೆ ಶೇಕಡ 50 ರಷ್ಟು ಪರಿಹಾರ ಧನ ಕನಿಷ್ಟ ₹ 7,500/– ಮತ್ತು ಗರಿಷ್ಟ ₹ 21250/–.

ಇ) ₹ 35,000/– ಗಳಿಗೆ ಮೇಲ್ಪಟ್ಟ ಬೆಳೆನಾಶಕ್ಕೆ ಶೇಕಡ 30 ರಷ್ಟು ಪರಿಹಾರ ಧನ, ಕನಿಷ್ಟ ₹ 21,250/– ಮತ್ತು ಗರಿಷ್ಟ ₹ 50,000/–.

ಉ) ಕಾಡಾನೆಗಳಿಂದ ರೈತರು ಬೆಳೆದ ಫಸಲು ಹಾಳಾಗುವುದನ್ನು ತಡೆಗಟ್ಟಲು ಇಲಾಖೆಯಿಂದ ಈ ಕೆಳಕಂಡ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.:–

1. ಕಾಡಾನೆಗಳು ಅರಣ್ಯ ಪರದೇಶದಿಂದ ಪಕ್ಕದ ಕೃಷಿ ಹಾಗೂ ಸಾರ್ವಜನಿಕರ ಸ್ಥಳಗಳಲ್ಲಿ ದಾಳೀ ಮಾಡುವುದನನ್ನು ತಡೆಗಟ್ಟುವ ಸಲುವಾಗಿ ಸೂಕ್ಷ್ಮ ಪ್ರದೇಶಗಳ ಅರಣ್ಯದ ಅಂಚಿನಲ್ಲಿ ಕಾಡಾನೆ ನಿರೋಧಕ ಕಂದಕ ಮತ್ತು ಸೌರಶಕ್ತಿ ಬೇಲಿ ನಿರ್ಮಿಸಿ ನಿರ್ವಹಿಸಲಾಗುತ್ತಿದೆ.

2. ಕಾಡಾನೆಗಳು ಪದೇ ಪದೇ ಕೃಷಿ ಜಮೀನುಗಳಿಗೆ ದಾಳಿ ಮಾಡುವ ಸೂಕ್ಷ್ಮ ಸ್ಥಳಗಳನ್ನು ಗುರುತಿಸಿ ಹಾವಳಿ ನಡೆಸುವ ಕಾಡಾನೆಗಳನ್ನು ಪುನಃ ಕಾಡಿಗೆ ಹಿಮ್ಮೆಟ್ಟಿಸುವ ಸಲುವಾಗಿ ಕಾಡಾನೆ ತಡೆ ತಂಡಗಳನ್ನು ರಚಿಸಿ, ಪ್ರತಿಯೊಂದು ತಂಡದಲ್ಲೂ ಸ್ಥಳೀಯರ ಜೊತೆಗೆ ನಾಲ್ಕು ಮಂದಿ ಅರಣ್ಯ ಸಿಬ್ಬಂದಿಗಳನ್ನು ನಿಯೋಜಿಸಿ ಕ್ರಮಕೈಗೊಳ್ಳಲಾಗುತ್ತಿದೆ.

3. ಸದರಿ ಸಿಬ್ಬಂದಿಗಳಿಗೆ ವಾಕೀ– ಟಾಕೀ, ಗನ್ ಹಾಗೂ ವಾಹನಗಳ ಸೌಲಭ್ಯಗಳನ್ನು ಕಾಡಾನೆಗಳನ್ನು ಅರಣ್ಯ ಪರದೇಶಗಳಿಗೆ ಹಿಮ್ಮೆಟ್ಟಿಸಲು ಒದಗಿಸಲಾಗುತ್ತಿದೆ.

4. ಸಿಬ್ಬಂದಿಗಳಿಗೆ ಪಟಾಕಿ ಇನ್ನಿತರ ಸಾಮಗ್ರಿಗಳನ್ನು ಒದಗಿಸಿ ಹಾವಳಿ ನಡೆಸುವ ಕಾಡಾನೆಗಳನ್ನು ಅರಣ್ಯ ಪ್ರದೇಶಗಳಿಗೆ ಹಿಮ್ಮೆಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

5. ವನ್ಯಜೀವಿ ಹಾವಳಿ ಹೆಚ್ಚಾಗಿ ಕಂಡುಬರುವ ಸೂಕ್ಷ್ಮ ಪ್ರದೇಶಗಳಲ್ಲಿ ಅವಶ್ಯಕತೆಗನುಗುಣವಾಗಿ Anti Depredation Camp ಗಳನ್ನು ಅಂದರೆ ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನೇ Rapid Response Teams (RRT) ತಂಡಗಳನ್ನಾಗಿಸಿ, ವನ್ಯಜೀವಿಗಳ ಹಾವಳಿ ನಿಯಂತ್ರಿಸಲಾಗುತ್ತಿದೆ.

6. ವನ್ಯಪ್ರಾಣಿ ಹಾವಳಿ ಕಂಡುಬಂದಾಗ ಕೂಡಲೇ ಕ್ರಮ ಕೈಗೊಳ್ಳುವ ಸಂಬಂಧ ಕೇಂದ್ರ ಸ್ಥಾನದಲ್ಲಿ 24 ಗಂಟೆಗಳ ಕಾಲ ಸೇವೆ ಒದಗಿಸುವ ಸಲುವಾಗಿ ಶುಲ್ಕ ರಹಿತ ಸೇವಾ ಸಂಖ್ಯೆ (Toll Free Number) ನ್ನು ಅನುಷ್ಠಾನಗೊಳಿಸಲಾಗಿದೆ. Toll Free Number – 1800 425 1314.

7. ಹಾವಳಿ ಮಾಡುತ್ತಿರುವ ಕಾಡುಪ್ರಾಣಿಗಳನ್ನು ಗುರ್ತಿಸಿ ಬೋನಿನಲ್ಲಿ ಮತ್ತು ಇತರೆ ರೂಪದಲ್ಲಿ ಹಿಡಿದು ಬೇರೆಡೆಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

8. ವನ್ಯಜೀವಿಗಳ ದಾಳಿಯ ಸಮಯದಲ್ಲಿ ಏನನ್ನು ಮಾಡಬೇಕು ಮತ್ತು ಮಾಡಬಾರದು ಎಂಬುದರ ಬಗ್ಗೆ ಸಾರ್ವಜನಿಕರಲ್ಲಿ ಸೂಚನಾ ಫಲಕದ ಹಾಗೂ ಗ್ರಾಮಸ್ಥರೊಂದಿಗೆ ಸಭೆಯನ್ನು ನಡೆಸುವ ಮುಖಾಂತರ ಜಾಗೃತಿಯನ್ನು ಮೂಡಿಸಲಾಗುತ್ತಿದೆ.

9. ಕಾಡಾನೆಗಳಿಗೆ ಅರಣ್ಯ ಪ್ರದೇಶಗಳ ಒಳಗೆ ನೀರಿನ ಸೌಕರ್ಯವನ್ನು ಸತತವಾಗಿ ಒದಗಿಸಿ, ವನ್ಯಪ್ರಾಣಿಗಳ ಆವಾಸ ಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ.

10. ಅರಣ್ಯ ಪ್ರದೇಶಗಳಲ್ಲಿ ಕಾಡಾನೆಗಳಿಗೆ ವರ್ಷವಿಡೀ ಕುಡಿಯುವ ನೀರು ದೊರಕುವಂತೆ ಅರಣ್ಯದಲ್ಲಿರುವ ಕೆರೆಗಳ ಹೂಳುತೆಗೆಯುವುದು. ಗಲ್ಲಿಪ್ಲಗ್, ಚೆಕ್‌ಡ್ಯಾಮ್, ನಾಲಾಬಂಡ್, ಇತ್ಯಾದಿ ಕೆಲಸಗಳನ್ನು ರಕ್ಷಿತಾರಣ್ಯಗಳಲ್ಲಿ ತೆಗೆದುಕೊಳ್ಳಲಾಗುತ್ತಿದೆ.

ಊ. ಕಾಡಾನೆಗಳಿಗೆ ಕಾಡಿನಲ್ಲೇ ಯೋಗ್ಯವಾದ ಸಸ್ಯ ಪ್ರಭೇದಗಳನ್ನು ಬೆಳೆಸಲು ಹಾಗೂ ಬಿದಿರು ಬೀಜಗಳ ಬಿತ್ತನೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ ಮತ್ತು ಅರಣ್ಯ ಪ್ರದೇಶಗಳಲ್ಲಿ ನೈಸರ್ಗಿಕವಾಗಿ ಬೆಳೆದಿರುವಂತಹ ಬೇರಿನ ಸಮೂಹಗಳನ್ನು / ಹುಲ್ಲು ಪ್ರಭೇದಗಳನ್ನು ರಕ್ಷಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಅಲ್ಲದೇ ಕೆಲವೊಂದು ಪ್ರದೇಶ ಗಳಲ್ಲಿ ಬಿದಿರು ಸಹಜವಾಗಿ ಪುನರುತ್ಪತ್ತಿಯಾಗುತ್ತಿರುವು ದರಿಂದ ಕಾಡಾನೆಗಳ ಆಹಾರದ ಕೊರತೆ ನೀಗಿಸಲು ಅನುಕೂಲವಾಗಿದೆ.

ರಕ್ಷಿತಾರಣ್ಯ ಪ್ರದೇಶಗಳಲ್ಲಿ ವನ್ಯಪ್ರಾಣಿಗಳಿಗೆ ಕುಡಿಯುವ ನೀರಿನ ಸೌಕರ್ಯ ಒದಗಿಸುವ ಸಲುವಾಗಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಕಾರ್ಯ ನಿರ್ವಹಣಾ ಯೋಜನೆಯಂತೆ ಮಣ್ಣು ಮತ್ತು ತೇವಾಂಶ ಸಂರಕ್ಷಣೆ ಕಾಮಗಾರಿಗಳಾದ ಚೆಕ್‌ಡ್ಯಾಮ್ ನಿರ್ಮಾಣ ಮತ್ತು ನಿರ್ವಹಣೆ ಮಾಡುವುದು/ ಗಲ್ಲಿಚೆಕ್ಸ್ ಮತ್ತು ಇಂಗು ಗುಂಡಿಗಳ ನಿರ್ಮಾಣ ಮತ್ತು ನಿರ್ವಹಣೆ ಮಾಡುವುದು/ ಹಾಲಿ ಇರುವ ಕೆರಗಳ ಹೊಳೆತ್ತುವುದು ಮತ್ತು ಸಣ್ಣ ಕೆರೆಗಳ ನಿರ್ಮಾಣ/ ಕೆರೆಗಳಿಗೆ ಮಳೆ ನೀರನ್ನು ತುಂಬಿಸಲು ಪೀಡರ್ ಚಾನೆಲ್ಗಳ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ಇಲಾಖಾ ವತಿಯಿಂದ ಕೈಗೊಳ್ಳಲಾಗುತ್ತಿದೆ.

ಮೇಲ್ಕಂಡ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುವುದರಿಂದ ಕಾಡಾನೆಗಳು ಮತ್ತು ವನ್ಯಪ್ರಾಣಿಗಳು ಆಹಾರ-ಮೇವು ಮತ್ತು ನೀರಿಗಾಗಿ ಗ್ರಾಮೀಣ ಪ್ರದೇಶಗಳಿಗೆ ಬರುತ್ತಿರುವುದನ್ನು ನಿಯಂತ್ರಿಸಲಾಗುತ್ತಿದೆ. ಆದರೆ ಬೇಸಿಗೆ ಕಾಲದಲ್ಲಿ ನೀರಿನ ಮೂಲಗಳಲ್ಲಿ ನೀರು ಬತ್ತಿ ಹೋಗುವುದರಿಂದ ಸಮಸ್ಯೆ ಉಂಟಾಗಿ ಕೆಲವೊಂದು ಗ್ರಾಮಗಳಿಗೆ ವನ್ಯಪ್ರಾಣಿಗಳು ಬರುತ್ತಿರುವ ಸಂಭವವಿರುತ್ತದೆ.

ಋ) ಕಳೆದ ಮೂರು ವರ್ಷದಲ್ಲಿ ಆನೆಗಳು ಮೃತಪಟ್ಟಿರುವವವರ ವಿವರ ಕೆಳಕಂಡಂತಿದೆ.

ವರ್ಷ	ಸ್ವಾಭಾವಿಕವಾಗಿ	ಅಸ್ವಾಭಾವಿಕವಾಗಿ		
		ಗುಂಡೇಟು	ವಿದ್ಯುತ್ ಸ್ಪರ್ಶ	ಕಳ್ಳಬೇಟೆ
2010–11	100	07	13	–
2011–12	103	03	15	–
2012–13	189	04	13	–
2013–14 (ಜನವರಿ–20 2014ರವರೆಗೆ)	108	01	04	02

ಎ) ಹೌದು, ಕ್ರಮಕ್ಕೈಗೊಳ್ಳಲಾಗಿರುತ್ತದೆ.

ಏ) ಹೌದು, ಕ್ರಮಕ್ಕೈಗೊಳ್ಳಲಾಗಿರುತ್ತದೆ.